# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ ಸಂಖ್ಯೆ.59, ಮಾರುತಿಸೇವಾನಗರ ವಾರ್ಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 02-02-2019 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

1) ಶ್ರೀಮತಿ ಹನ್ನಾ ಭುವನೇಶ್ವರಿ, ಅಧ್ಯಕ್ಷರು, (ಬಿ.ಬಿ.ಎಂ.ಪಿ ಸದಸ್ಯರು)
2) ಶ್ರೀ ಪಿ.ಶಣ್ಮುಗಂ, ಸದಸ್ಯರು,
3) ಶ್ರೀ ನರಸಿಂಹ.ಕೆ, ಸದಸ್ಯರು,
4) ಶ್ರೀಮತಿ ಶ್ರೀದೇವಿ, ಸದಸ್ಯರು
5) ಶ್ರೀಮತಿ ರಾಣಿ, ಸದಸ್ಯರು,
6) ಶ್ರೀಮತಿ ಕಮಲ, ಸದಸ್ಯರು,
7) ಶ್ರೀ ಬಿ.ಯು. ಚರಿಯತ್, ಸದಸ್ಯರು,
8) ಶ್ರೀ ಪಾಷಾ, ಸದಸ್ಯರು,
9) ಶ್ರೀ ಚಲಪತಿ, ಸದಸ್ಯರು,
10) ಶ್ರೀ ಸುರೇಶ್, ಸದಸ್ಯರು,
11) ಶ್ರೀ ಗಿರೀಶ್, ಸದಸ್ಯರು,

**ಈ ಸಭೆಗೆ ಹಾಜರಾಗಿದ್ದ** ಮೇಲ್ಕಂಡ ಸದಸ್ಯರು ಹಾಗೂ ವಾರ್ಡಿನ ಕಾರ್ಯದರ್ಶಿ ಹಾಗೂ ಸಂಚಾಲಕರು ರವರುಗಳನ್ನು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) **ಶ್ರೀ ನರಸಿಂಹ, ವಾರ್ಡ್ ಕಮಿಟಿ ಸದಸ್ಯರು** ರವರು ಮಾತನಾಡುತ್ತಾ, ಕೆ.ಆರ್.ಪಾಳ್ಯ ವ್ಯಾಪ್ತಿಯ ಪ್ರದೇಶದಲ್ಲಿ ಅಲ್ಲಲ್ಲಿ ಹಾಳಾಗಿರುವ ಸುಮಾರು 100 ಮೀಟರ್ ಚರಂಡಿ ಕಾಮಗಾರಿಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಅತೀ ತುರ್ತಾಗಿ ಕೈಗೊಳ್ಳಲು ಕೋರಿದರು. ಕೆ.ಆರ್ ಪಾಳ್ಯ ಸುತ್ತಮುತ್ತಲ ಪ್ರದೇಶದಲ್ಲಿ ಹೆಚ್ಚಾಗಿ ಕೂಲಿ ಕಾರ್ಮಿಕರು, ಮಧ್ಯಮ ವರ್ಗದ ನಿವಾಸಿಗಳು ವಾಸಿಸುತ್ತಿದ್ದು, ಈ ಪ್ರದೇಶದ ನಿವಾಸಿಗಳು ಕಾರ್ಯಕ್ರಮಗಳನ್ನು ಮಾಡಲು ಸೂಕ್ತವಾದ ಪಾರ್ಟಿ ಹಾಲ್ ಇಲ್ಲದೇ ಇರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸರ್ಕಾರಿ ಜಾಗದಲ್ಲಿ ಪಾರ್ಟಿ ಹಾಲ್ ನಿರ್ಮಾಣ ಮಾಡಲು ಕೋರಿದರು. ಹಾಗೂ ಚೆಟ್ಟಪ್ಪ ಗಾರ್ಡನ್ ಪ್ರದೇಶದಲ್ಲಿ ಕಸ ಸಂಗ್ರಹಣೆ ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ ಸಾರ್ವಜನಿಕರು ಎಲ್ಲಂದರಲ್ಲಿ ಕಸ ಎಸೆದು ವಾತಾವರಣವನ್ನು ಹಾಳು ಮಾಡುತ್ತಿರುವುದರಿಂದ ಇದನ್ನು ತಡೆಗಟ್ಟಲು ಅಲ್ಲಲ್ಲಿ ಕಸದ ಡಬ್ಬಿಗಳನ್ನು ಅಳವಡಿಸಿ, ಕಸ ವಿಲೇವಾರಿ ಮಾಡಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ ಈ ಬಗ್ಗೆ ಸಂಬಂಧಪಟ್ಟ ಇಲಾಖೆಯೊಂದಿಗೆ ಚರ್ಚಿಸಿ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಲಾಯಿತು.

2) **ಶ್ರೀ ಶಣ್ಮುಗಂ, ವಾರ್ಡ್ ಕಮಿಟಿ ಸದಸ್ಯರು** ರವರು ಮಾತನಾಡಿ, ಮುದ್ದಪ್ಪ ಗಾರ್ಡನ್ ಅನೇಕ ಪ್ರದೇಶಗಳಲ್ಲಿ ರಸ್ತೆಗಲ ಬಡಿಯಲ್ಲಿ ಎಲ್ಲಂದರಲ್ಲಿ ಡೆಬ್ರೀಸ್ ಬಿದ್ದಿದ್ದು ಇದರಿಂದ ಅಕ್ಕಪಕ್ಕದ ನಿವಾಸಿಗಳಿಗೆ ಹಾಗೂ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು ಕೂಡಲೇ ಇದನ್ನು ತೆರವುಗೊಳಿಸಲು ಹಾಗೂ ಮುದ್ದಪ್ಪ ಗಾರ್ಡನ್ ಪ್ರದೇಶದ ಅನೇಕ ಸ್ಥಳಗಳಲ್ಲಿ ರಾತ್ರಿ ಸಮಯದಲ್ಲಿ ಬೀದಿ ದೀಪಗಳು ಸರಿಯಾಗಿ ನಿರ್ವಹಿಸದೇ

ಇರುವುದರಿಂದ ಸಾರ್ವಜನಿಕರು ಕಸವನ್ನು ಮತ್ತು ಕಟ್ಟಡದ ತ್ಯಾಜ್ಯವನ್ನು ಎಲ್ಲಂದರಲ್ಲಿ' ಎಸೆಯುತ್ತಿರುವುದರಿಂದ ಕೂಡಲೇ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಲು ಕೋರಿದರು. ಹಾಗೂ ಬೃಹತ್ ನೀರುಗಾಲುವೆಯಲ್ಲಿರುವ ತ್ಯಾಜ್ಯವನ್ನು ಆಗಿಂದಾಗ್ಗೆ ತೆರವುಗೊಳಿಸದೇ ಇರುವುದರಿಂದ ಕಸ ಸಂಗ್ರಹವಾಗಿ ನೀರು ಅಲ್ಲೇ ನಿಲ್ಲುವುದರಿಂದ ಸೊಳ್ಳೆಗಳು ಹೆಚ್ಚಾಗುತ್ತಿರುವುದಾಗಿ ಇದನ್ನು ಕೂಡಲೇ ಸರಿಪಡಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ ಈ ಬಗ್ಗೆ ಆರೋಗ್ಯ ಇಲಾಖೆ, ಬೆಸ್ಕಾಂ ಮತ್ತು ಕಾಮಗಾರಿ ಇಲಾಖೆಗಳಿಗೆ ಕ್ರಮ ವಹಿಸಲು ಸೂಚಿಸಲಾಯಿತು.

3) **ಶ್ರೀಮತಿ ರಾಣಿ, ವಾರ್ಡ್ ಕಮಿಟಿ ಸದಸ್ಯರು** ರವರು ಮಾತನಾಡುತ್ತಾ, ಕೆ.ಹೆಚ್.ಬಿ ಕ್ವಾಟ್ರಸ್‌ನಲ್ಲಿ ಸರಿಯಾದ ನಿರ್ವಹಣೆಯನ್ನು ಮಾಡುತ್ತಿಲ್ಲವೆಂದು ಇದನ್ನು ಅತೀ ಶೀಘ್ರವಾಗಿ ಸರಿಪಡಿಸಿಕೊಡಬೇಕೆಂದು ಕೋರಿದರು. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಅನೇಕ ಕಡಗಳಲ್ಲಿ ಬೀದಿ ದೀಪಗಳ ಸಂಪರ್ಕವು ಸರಿಯಿಲ್ಲದೇ ಇರುವುದರಿಂದ ರಾತ್ರಿ ವೇಳೆಯಲ್ಲಿ ಹೆಣ್ಣುಮಕ್ಕಳು ಮತ್ತು ಸಾರ್ವಜನಿಕರು ಓಡಾಡಲು ತುಂಬಾ ತೊಂದರೆಯುಂಟಾಗುತ್ತಿರುವುದಲ್ಲದೇ, ರಾತ್ರಿ ವೇಳೆಯಲ್ಲಿ ಅಂತಹ ಸ್ಥಳಗಳಲ್ಲಿ ಪುಂಡ ಪೋಕರಿಗಳ ಹಾವಳಿ ಹೆಚ್ಚಾಗುತ್ತಿರುವುದರಿಂದ ಸದರಿ ಸ್ಥಳಗಳಲ್ಲಿ ಬೆಸ್ಕಾಂ ಸಂಸ್ಥೆಯವರಿಗೆ ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲು ಕೋರಿದರು. ಹಾಗೂ ಬೃಹತ್ ನೀರುಗಾಲುವೆಯಲ್ಲಿ ಸುತ್ತಮುತ್ತಲ ಪ್ರದೇಶದ ನಿವಾಸಿಗಳು ಕಸ ಎಸೆಯುತ್ತಿದ್ದು, ಇದರ ಎತ್ತರವನ್ನು ಕೂಡಲೇ ಇತ್ತರಿಸಿ, ಸದರಿ ಬೃಹತ್ ನೀರುಗಾಲುವೆಗೆ ಫೆನ್ಸಿಂಗ್ ಅಳವಡಿಸಲು ಪ್ರಸ್ತಾಪಿಸಿದಾಗ, ಮಾನ್ ಅಧ್ಯಕ್ಷರು ಮಾತನಾಡಿ, ಸಭೆಯಲ್ಲಿ ಹಾಜರಿದ್ದು ಬೀದಿ ದೀಪಗಳ ವಿಭಾಗ ರವರಿಗೆ ಈ ಬಗ್ಗೆ ಕೂಡಲೇ ಕ್ರಮ ವಹಿಸಲು ಸೂಚಿಸಲಾಯಿತು.

4) **ಶ್ರೀ ಅಂಜುಮ್, ವಾರ್ಡ್ ಕಮಿಟಿ ಸದಸ್ಯರು** ರವರು ಮಾತನಾಡುತ್ತಾ, ಹಚ್ಚಿನ್ಸ್ ರಸ್ತೆ (ದೇವಸ್ಥಾನ ಬೀದಿ), ಗಣಪತಿ ರಸ್ತೆಯಲ್ಲಿ ಚರಂಡಿಯನ್ನು ನಿರ್ಮಾಣ ಮಾಡಲು ಮತ್ತು ಈಗಾಗಲೇ ಇರುವ ಚರಂಡಿಗಳು ಹಾಳಾಗಿರುವುದರಿಂದ ಅದನ್ನು ಸರಿಪಡಿಸಿಕೊಡಲು ಕೋರಿದರು. ಹಚ್ಚಿನ್ಸ್ ರಸ್ತೆ 2ನೇ ಅಡ್ಡರಸ್ತೆ, 4ನೇ ಅಡ್ಡರಸ್ತೆ, ಪಶ್ಚಿಮ ಭಾಗದ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಕೂಡಲೇ ಕೈಗೊಳ್ಳಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಹಚ್ಚಿನ್ಸ್ ರಸ್ತೆ 2ನೇ ಅಡ್ಡರಸ್ತೆ, 4ನೇ ಅಡ್ಡರಸ್ತೆ, ಪಶ್ಚಿಮ ಭಾಗದ ರಸ್ತೆಯ ಕಾಮಗಾರಿಯನ್ನು ಅಭಿವೃದ್ಧಿ ಕಾಮಗಾರಿಗಳ ಪಟ್ಟಿಯಲ್ಲಿ ಸೇರಿಸಿ, ಕಾಮಗಾರಿ ನಿರ್ವಹಿಸಲು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಲಾಯಿತು.

5) **ಶ್ರೀ ಚಲಪತಿ, ವಾರ್ಡ್ ಕಮಿಟಿ ಸದಸ್ಯರು** ರವರು ಮಾತನಾಡುತ್ತಾ, ಜೀವನಹಳ್ಳಿ ಪ್ರದೇಶದಲ್ಲಿ ಬೃಹತ್ ನೀರುಗಾಲುವೆ ಕಾಮಗಾರಿಯನ್ನು ಪೂರ್ಣಗೊಳಿಸಿರುವುದಿಲ್ಲ ಹಾಗೂ ಜೀವನಹಳ್ಳಿ ರಸ್ತೆಯಲ್ಲಿ ಇತ್ತೀಚೆಗೆ ವಾಹನ ದಟ್ಟಣೆ ಹೆಚ್ಚಾಗುತ್ತಿರುವುದರಿಂದ ಈ ರಸ್ತೆಗಳಲ್ಲಿ ಓಡಾಡಲು ಸಾರ್ವಜನಿಕರಿಗೆ ಸರಿಯಾದ ಪಾದಾಚಾರಿ ರಸ್ತೆಯೇ ಇಲ್ಲದೇ ಇರುವುದರಿಂದ ರಸ್ತೆಗಳಲ್ಲಿ ವಾಹನಗಳ ಮಧ್ಯದಲ್ಲಿ ಓಡಾಡುವ ಪರಿಸ್ಥಿತಿ ಇದೆ ಎಂದು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಕೋರಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಪ್ರದೇಶದಲ್ಲಿ ಬೃಹತ್ ನೀರುಗಾಲುವೆ ಕಾಮಗಾರಿಯು ಪ್ರಗತಿಯಲ್ಲಿದ್ದು, ಈ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ಅತೀ ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗುವುದೆಂದು ಸಭೆಗೆ ತಿಳಿಸಲಾಯಿತು.

6) **ಶ್ರೀ ಪಾಷಾ, ವಾರ್ಡ್ ಕಮಿಟಿ ಸದಸ್ಯರು** ರವರು ಮಾತನಾಡುತ್ತಾ, ಬೃಹತ್ ನೀರುಗಾಲುವೆ ಕಾಮಗಾರಿಯು' ಪ್ರಸ್ತುತ ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಯನ್ನು ಅತೀ ಜರೂರಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿ ಅನುವು ಮಾಡಿಕೊಡಲು ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಚಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು.

7) **ಶ್ರೀ ಸುರೇಶ್, ವಾರ್ಡ್ ಕಮಿಟಿ ಸದಸ್ಯರು ರವರು** ಮಾತನಾಡುತ್ತಾ, ಮುದ್ದಪ್ಪ ಗಾರ್ಡನ್‌ನಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮ ರವರು ನೀರು ಸರಬರಾಜು ಸರಿಯಾದ ಸಮಯದಲ್ಲಿ ಬಿಡದೇ ಇರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯುಂಟಾಗುತ್ತಿರುತ್ತದೆ ಹಾಗೂ ಮುದ್ದಪ್ಪ ಗಾರ್ಡನ್‌ನಲ್ಲಿರುವ ಬೋರ್‌ವೆಲ್‌ನ ನಿರ್ವಹಣೆಯನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮ ರವರಿಗೆ ವಹಿಸಲು ಸಭೆಗೆ ತಿಳಿಸಿದರು. ಹಾಗೂ ಬೃಹತ್ ನೀರುಗಾಲುವೆ ಕಾಮಗಾರಿಯು ತುಂಬಾ ನಿಧಾನಗತಿಯಲ್ಲಿ ನಡೆಯುತ್ತಿರುವುದರಿಂದ ಸದರಿ ಕಾಮಗಾರಿಯನ್ನು ತುರ್ತಾಗಿ ಕೈಗೊಂಡು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಅಲ್ಲದೇ ಈ ಪ್ರದೇಶದಲ್ಲಿ ಕಸ ಸಂಗ್ರಹಣೆಯನ್ನು ಸರಿಯಾಗಿ ನಿರ್ವಹಿಸದೇ ಇರುವುದರಿಂದ ಸಾರ್ವಜನಿಕರು ಎಲ್ಲಂದರಲ್ಲಿ ಕಸವನ್ನು ಎಸೆದು ವಾತಾವರಣವನ್ನು ಹಾಳು ಮಾಡುತ್ತಿರುತ್ತಾರೆ ಎಂದು ಸಭೆಗೆ ಪ್ರಸ್ತಾಪಿಸಿದಾಗ ಮಾನ್ಯ ಅಧ್ಯಕ್ಷರು ಮಾತನಾಡಿ, ನೀರಿನ ಸಮಸ್ಯೆಯನ್ನು ಮತ್ತು ಈ ಪ್ರದೇಶದಲ್ಲಿರುವ ಬೋರ್‌ವೆಲ್‌ಅನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮ ರವರೊಂದಿಗೆ ಕೂಲಂಕುಷವಾಗಿ ಚರ್ಚಿಸಿ ಮುಂದಿನ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು. ಹಾಗೂ ಕಸ ಸಂಗ್ರಹಣೆ ಮತ್ತು ವಿಲೇವಾರಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷಕರಿಗೆ ಈ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಲಾಯಿತು.

8) **ಶ್ರೀ ಗಿರಿ, ವಾರ್ಡ್ ಕಮಿಟಿ ಸದಸ್ಯರು ರವರು** ಮಾತನಾಡುತ್ತಾ, ಕೃಷ್ಣಪ್ಪ ಗಾರ್ಡನ್‌ನಲ್ಲಿ ದಿನನಿತ್ಯ ಕಸ ಸಂಗ್ರಹಣೆಯನ್ನು ಸರಿಯಾಗಿ ನಿರ್ವಹಿಸುತ್ತಿರುವುದಿಲ್ಲ ಈ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು. ಕೃಷ್ಣಪ್ಪ ಗಾರ್ಡನ್‌ನಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮ ರವರು ನೀರು ಸರಬರಾಜು ಸರಿಯಾದ ಸಮಯದಲ್ಲಿ ಬಿಡದೇ ಇರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯುಂಟಾಗುತ್ತಿರುತ್ತದೆ ಎಂದು ಸಭೆಗೆ ತಿಳಿಸಿದರು. ಹಾಗೂ ಈ ಪ್ರದೇಶದಲ್ಲಿ ವಿದ್ಯುತ್ ಕಂಬಗಳ ನಿರ್ವಹಣೆಯನ್ನು ಸಹ ಮಾಡದೇ ಇರುವುದರಿಂದ ಕೆಲವು ವಿದ್ಯುತ್ ಕಂಬಗಳಲ್ಲಿ ಬೀದಿ ದೀಪಗಳು ಉರಿಯದೇ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವುದಾಗಿ ಈ ಬಗ್ಗೆ ಕೂಡಲೇ ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಪ್ರದೇಶದಲ್ಲಿ ಎಲ್ಲಂದರಲ್ಲಿ ಡೆಬ್ರೀಸ್ ಬಿದ್ದಿದ್ದು, ಇದನ್ನು ಆಗಿಂದಾಗ್ಗೆ ತೆರವುಗೊಳಿಸಲು ಅವಶ್ಯಕತೆ ಇರುವುದರಿಂದ ಲಾಜರ್ ರಸ್ತೆ ಮತ್ತು ಇತರೆ ಸುತ್ತಮುತ್ತಲ ಪ್ರದೇಶಗಳ ಸ್ವಚ್ಛತೆಗೆ ಶಿಲ್ಟ್ ಅಂಡ್ ಟ್ರ್ಯಾಕ್ಟರ್ ಕಾಮಗಾರಿಯು ಅವಶ್ಯಕತೆ ಇರುವುದಾಗಿ ಸಭೆಗೆ ತಿಳಿಸಿದರು. ಹಾಗೂ ಈ ಪ್ರದೇಶದಲ್ಲಿರುವ ಅನೇಕ ಮರಗಳಲ್ಲಿರುವ ಒಣಗಿದ ಮರದ ರೆಂಬೆ ಕೊಂಬೆಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲು ಕೋರಿದರು.

ಈ ಎಲ್ಲಾ ಅಂಶಗಳ ಬಗ್ಗೆ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ನೀರು ಸರಬರಾಜಿನಲ್ಲಿ ಉಂಟಾಗಿರುವ ವ್ಯತ್ಯಯದ ಬಗ್ಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮರವರೊಂದಿಗೆ ಚರ್ಚಿಸಿ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಲಾಯಿತು. ಹಾಗೂ ಡೆಬ್ರೀಸ್ ಮತ್ತು ಶಿಲ್ಟ್ ಅನ್ನು ತೆರವುಗೊಳಿಸುವ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು. ಹಾಗೂ ಕಸ ಸಂಗ್ರಹಣೆ ಮತ್ತು ವಿಲೇವಾರಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷರು ರವರಿಗೆ ಈಗಾಗಲೇ ಸೂಕ್ತ ಕ್ರಮ ವಹಿಸಲು ಸೂಚಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

9) **ಶ್ರೀ ಅಂಜುಮ್, ವಾರ್ಡ್ ಕಮಿಟಿ ಸದಸ್ಯರು ರವರು** ಮಾತನಾಡುತ್ತಾ, ಅಶೋಕ ರಸ್ತೆ ಮತ್ತು ನಾಥ್‌ಗ ರಸ್ತೆಗಳಲ್ಲಿ ವಿದ್ಯುತ್ ಕಂಬದಲ್ಲಿ ಅಲ್ಲಲ್ಲಿ ಕೇಬಲ್‌ಗಳು ಡ್ಯಾಮೇಜ್ ಆಗಿರುವುದರಿಂದ ವಿದ್ಯುತ್ ಕಂಬದ ಸುತ್ತಮುತ್ತ ಸಂಚಾರ ಮಾಡುವ ಸಾರ್ವಜನಿಕರಿಗೆ ತೊಂದರೆಯಾಗುವ ಸಾಧ್ಯತೆ ಇರುವುದರಿಂದ ಈ ಬಗ್ಗೆ ಬೆಂಗಳೂರು ವಿದ್ಯುತ್ ಸರಬರಾಜು ಮಂಡಳಿ ರವರಿಗೆ ಕೂಡಲೇ ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ ಮಾನ್ಯ ಸದಸ್ಯರು ಮಾತನಾಡಿ, ಈ ಬಗ್ಗೆ ಬೆಸ್ಕಾಂ ಅಧಿಕಾರಿಗಳೊಂದಿಗೆ ಚರ್ಚಿಸಿ ಅತೀ ಜರೂರಾಗಿ ಕ್ರಮ ಕೈಗೊಳ್ಳಲಾಗುವುದೆಂದು ಹಾಗೂ ಹ್ಯಾಂಡ್ ಪಂಪ್‌ನ್ನು ತೆರವುಗೊಳಿಸಿ, ಪೈಪ್‌ಲೈನ್ ಅಳವಡಿಸಿ ಸಾರ್ವಜನಿಕರಿಗೆ ನೀರಿನ ಸಂಪರ್ಕ ಕಲ್ಪಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮ ರವರ ಅಧಿಕಾರಿಗಳಿಗೆ ಈ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

ಈ ಮೇಲ್ಕಂಡ ವಿಷಯಗಳ ಬಗ್ಗೆ ವಾರ್ಡ್ ಸಭೆಯು ಅಗತ್ಯ ಕ್ರಮವಹಿಸುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸಹಿ/-

**ಸಂಚಾಲಕರು / ಕಾರ್ಯದರ್ಶಿಗಳು**
**ವಾರ್ಡ್ ಸಂಖ್ಯೆ.59, ಮಾರುತಿ ಸೇವಾನಗರ**

**ಹನ್ನಾ ಭುವನೇಶ್ವರಿ (ಭುವನ)**
**ಕಾರ್ಪೊರೇಟರ್, ವಾರ್ಡ್ ಸಂಖ್ಯೆ.59**
**ಮಾರುತಿಸೇವಾನಗರ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಪ್ರತಿಯನ್ನು

1) ಅಪರ / ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ಸಹಾಯಕ ಅಭಿಯಂತರರು (ವಾರ್ಡ್ ಸಂಖ್ಯೆ.59) ರವರಿಗೆ
5) ಕಮಿಟಿಯ ಸದಸ್ಯರಿಗೆ.
6) ಕಛೇರಿ ಕಡತಕ್ಕೆ.